<u>**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**</u>

<u>**ಸಿ.ಸಿ ನಂ.776/2021**</u>

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಪ್ಪ ಹರಿಜನ | ಪಿಡಬ್ಲ್ಯೂ | 10 |
| ತಂದೇ\ಗಂಡನ ಹೆಸರು | : | ಹನುಮಂತಪ್ಪ | ಸಿಡಬ್ಲ್ಯೂ | 10 |
| ವಯಸ್ಸು | : | 30 ವರ್ಷ | | |
| ಉದ್ಯೋಗ | : | ಗೌಂಡಿ ಕೆಲಸ | | |
| ವಾಸ ಸ್ಥಳ | : | ಮಾರನಬೀಡ | | |

<u>**ದಿನಾಂಕ: 24.04.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**</u>

ನನಗೆ ಚಾಸಾ-1, 6 ಮತ್ತು 7 ರವರ ಪರಿಚಯ ಇದೆ. 2015 ನೇ ಇಸವಿಯಂದು ಚಾಸಾ-6 ರವರು ಚಾಸಾ-7 ರವರನ್ನು ನನ್ನ ಬೈಕ್ ಮೂಲಕ ಆಸ್ಪತ್ರೆಗೆ ತೋರಿಸಲು ಬೆಳಗಾಲಪೇಟೆಯ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗ ಹೊಂಬಳಿ ಗ್ರಾಮದ ಮುಂದೆ ಬೈಕ್ ಬಂದು ನನ್ನ ಚಲಾಯಿಸುತ್ತಿದ್ದ ಬೈಕ್ ಡಿಕ್ಕಿ ಪಡಿಸಿದರು ಎಂಬ ವಿಚಾರವನ್ನು ನಮ್ಮ ಮನೆಯ ಪಕ್ಕದವರು ತಿಳಿಸಿದರು. ತಕ್ಷಣ ನಾನು, ಚಾಸಾ-1 ಮತ್ತು 4 ರವರು ಆ ಸ್ಥಳಕ್ಕೆ ಹೋದೆವು. ಆ ಸಂದರ್ಭದಲ್ಲಿ ಮೃತ ಬಸವರಾಜ ಕಾಲಿಗೆ ಗಾಯಗಳಾಗಿದ್ದವು. ಅದೇ ರೀತಿ ಚಾಸಾ-6 ರವಾರ ಕೈಗೆ ಮತ್ತು ತಲೆಗೆ ಭುಜಕ್ಕೆ ಗಾಯಗಳಾಗಿದ್ದವು. ಚಾಸಾ-7 ರವರ ತಲೆಗೆ ಸಹ ಗಾಯಗಳಾಗಿದ್ದವು. ಆ ನಂತರ ಒಂದು ಟಾಟಾ ಏಸಿ ವಾಹನದ ಮೂಲಕ ಮೃತ ಬಸವರಾಜನನ್ನು ಹಾನಗಲ್ ಆಸ್ಪತ್ರೆಗೆ ಕಳುಹಿಸಿದೆವು. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಗಾಯಾಳುಗಳನ್ನು ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. 2015 ರಂದು ಬಸವರಾಜ ರವರು ಆಸ್ಪತ್ರೆಯಲ್ಲಿ ಮೃತ ಪಟ್ಟರು. ಈ ಬಗ್ಗೆ

ಪೊಲಿಸರು ನನ್ನ ಹೇಳಿಕೆಯನ್ನು ಪಡೆದರು. ಆ ಅಪಘಾತ ಪಡಿಸಿದ ಮೋಟಾರ ಸೈಲ್ ನಂಬರ ನನಗೆ ಗೊತ್ತಿಲ್ಲ. ಅದೇ ರೀತಿ ಆ ಬೈಕ್ ಸವಾರನ ಹೆಸರು ಸಹ ಗೊತ್ತಿಲ್ಲ. ಆತನನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿನಾಂಕ 23.11.2015 ರಂದು ಮೃತ ಬಸವರಾಜ ರವರು ತನ್ನ ಅಣ್ಣನ ಮಗ ಚಾಸಾ-7 ರವರನ್ನು ಆಸ್ಪತ್ರೆಗೆ ತೋರಿಸುವ ಸಂಬಂಧ ನನ್ನ ಮೋಟಾರ ಸೈಕಲ್ ನ್ನು ತೆಗೆದುಕೊಂಡು ಹೋಗಿದ್ದರು ಎಂದರೆ ಸರಿ. ಈ ಅಪಘಾತ ವಿಜಯ ಬೈಲವಾಳ ಎಂಬುವವರ ಜಮೀನಿನ ಹತ್ತಿರ ಆಯಿತು ಎಂದರೆ ಸರಿ. ಆ ಸಂದರ್ಭದಲ್ಲ್ ಆ ಬೈಕ್ ಸವಾರ ಬೈಕನ್ನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಆ ಮೋಟಾರ ಸೈಕ್ಲ ನಂಬರ ಕೆ ಎ 27/ಎಸ್-1822 ಆಗಿದ್ದು ಆ ಬೈಕನ್ನು 1 ನೇ ಆರೋಪಿ ಹಿಂಬದಿ ಸವಾರನಾಗಿ 2 ನೇ ಆರೋಪಿಯನ್ನು ಕೂಡಿಸಿಕೊಂಡು ಚಲಾಯಿಸುತ್ತಿದ್ದನು ಎಂದರೆ ಸರಿ. ಈ ಅಪಘಾತವಾದ ವಿಚಾರ ಅದೇ ಸಂಜೆ 06.30 ಗಂಟೆ ಗೊತ್ತಾಯಿತು ಎಂದರೆ ಸರಿ. ಮೃತ ಬಸವರಾಜ ರವರು ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 29.11.2015 ರಂದು ಬೆಳಿಗ್ಗೆ 09.50 ಗಂಟೆಗೆ ಕಿಮ್ಸ ಆಸ್ಪತ್ರೆಯಲ್ಲಿ ಮೃತ ಪಟ್ಟರು ಎಂದರೆ ಸರಿ.

**:ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಸ್ ಜಿ ಟಿ ವಕೀಲರಿಂದ:**

ಪೋಲಿಸರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ರಸ್ತೆ ತಗ್ಗಿನಿಂದ ಕೂಡಿದ್ದು ಯಾವುದೇ ವಾಹನಗಳು ಅತೀ ವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ರಾತ್ರಿ 07.00 ಗಂಟೆ

ಸಮಯವಾಗಿತ್ತು. ನಾನು ಸ್ಥಳಕ್ಕೆ ಹೋದಾಗ ಸಾಕಷ್ಟು ಜನರು ಇದ್ದರು. ಅವರ ಹೆಸರುಗಳು ಈಗ ನನಗೆ ನೆನಪಿರುವುದಿಲ್ಲ. ಈ ಅಪಘಾತದ ವಿಚಾರವನ್ನು ಬೇರೆಯವರಿಂದ ನಾನು ವಿಚಾರಿಸಿರುವುದಿಲ್ಲ. ಆರೋಪಿ ಈ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ, ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆ ಸ್ಥಳದಲ್ಲಿ ಯಾರು ಸಹ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ